ಅಂದು ಬೆಳಿಗ್ಗೆ ಬೆಳಿಗ್ಗೆಯೇ ಜಯ್ಯಣ್ಣ ಮೇಷ್ಟ್ರ ಮನೆ ಮುಂದೆ ಒಂದು ಮಣ್ಣಿನ ತಟ್ಟೆಯಲ್ಲಿ ತೆಂಗಿನ ಚಿಪ್ಪು, ಇದ್ದಿಲು ಮತ್ತು ಕೆಂಡಗಳನ್ನಿಟ್ಟು ಹೊಗೆ ಹಾಕಿದ್ದರು. ಆ ಮನೆ ಮುಖ ಮಾಡಿಕೊಂಡಿದ್ದ ರಸ್ತೆಗುಂಟ ಹೋಗುತ್ತಿದ್ದ ಇಬ್ಬರು ಹೈಸ್ಕೂಲ್ ಹುಡುಗರು 'ಓಹೋ, ಜಯ್ಯಣ್ಣ ಮೇಷ್ಟ್ರು ಟಿಕೇಟು ತಗಂಡ್ರು ಕಣ್ಲಾ, ಅಬ್ಬಬ್ಬ ಯಾಪಾಟಿ ಕುಡೀತಿದ್ರುಲೇ ಅವ್ರು. ಆ ದೇವ್ರು ತಾನೇ ಎಷ್ಟು ದಿನ ಬಿಡ್ತನೆ ಅಂತವ್ರನ್ನ ಈ ಭೂಮಿ ಮ್ಯಾಲೆ?' ಎಂದು ಉದ್ಗಾರವೆತ್ತುತ್ತ ಮನೆಯೊಳ ಹೊಕ್ಕು ನೋಡದೆ ತಾವು ಹೊತ್ತ ಕೊಡಪಾನಗಳನ್ನು ಮನೆಯಲ್ಲಿಟ್ಟು ಬರಲು ಹಾಗೇ ಮುಂದೆ ಸಾಗಿದರು. ಅಷ್ಟೊತ್ತಿಗಾಗಲೇ ಹಲವಾರು ಮೇಷ್ಟ್ರುಗಳು ಅಲ್ಲಿ ನೆರೆದಿದ್ದರು. ಮೇಷ್ಟು ವಿದ್ಯಾರ್ಥಿಗಳು ಕಣ್ಣಿಗೆ ಬಿದ್ದ ಕೂಡಲೇ ಬೈಯ್ಯುವುದೋ ಅಥವಾ ಏನಾದರೊಂದು ಕೆಲಸ ಹೇಳುವುದೋ ಮಾಡುತ್ತಿದ್ದರು. ಅವೆರಡರಿಂದ ತಪ್ಪಿಸಿಕೊಳ್ಳಲು ಆ ಹುಡುಗರು ವಿಷಯ ಮುಟ್ಟಿಸಲು ತಮ್ಮ ತಮ್ಮ ಮನೆಗೆ ದೌಡು ಹೊಡೆದರು. ಆ ದಿನ ಹೇಗೂ ರಜೆ ಬಿಡುವುದು ಖಂಡಿತವಾದ್ದರಿಂದ ಆಮೇಲೆ ಬಂದು ಜಯ್ಯಣ್ಣ ಮೇಷ್ಟ್ರನ್ನ ನೋಡಿದರಾಯಿತು ಎಂದುಕೊಂಡರು.

* * *

ಜಯ್ಯಣ್ಣ ಮೇಷ್ಟ್ರ ಹೆಂಡತಿ ಲಕ್ಷ್ಮಿಯ ಬಲಗಡೆಗೆ ಭದ್ರಿ ಮತ್ತು ಎಡಗಡೆಗೆ ಸೀತ ಮತ್ತು ಗೀತ ಮಲಗುವುದು ರೂಢಿ. ಮಕ್ಕಳು ಅಮ್ಮ ಮಾಡಿದ್ದ ರಾಗಿಮುದ್ದೆ ಹುಳಿಸೊಪ್ಪು ಉಂಡು ಹಾಸಿಗೆ ಮೇಲೆ ಉರುಳಿಕೊಂಡಿದ್ದರು. ಚಿಕ್ಕವರಾದ ಭದ್ರಿ ಮತ್ತು ಸೀತೆಗೆ ಅನ್ನ ತಿನ್ನಬೇಕೆಂದಾಸೆ. ಆದರೆ ಅಂದು ಅನ್ನ ಮಾಡಿರಲಿಲ್ಲವಾಗಿ ಗೊಣಗುತ್ತ ಉಂಡಿದ್ದರು. ಭದ್ರಿ ಕಣ್ಣಿಂದ ಒಂದೆರಡು ಹನಿಗಳು ಉದುರಿದ್ದವು ಸಹ. ಲಕ್ಷ್ಮಿ 'ಭದ್ರಿ ಜಾಣ ಅಳ್ಬಾರ್ದು. ನಾಳೆ ಅನ್ನ ಮಾಡ್ತೀನಿ. ಇವತ್ತು ಅಕ್ಕಿ ತರಕ್ಕೆ ದುಡ್ಡಿರಲಿಲ್ಲ. ಅಂಗಡಿಯವರು ಉದ್ರಿ ಕೊಡಕ್ಕೆ ಹಿಂದು ಮುಂದು ನೋಡ್ತಾರೆ' ಎಂದಳು. ರಾತ್ರಿ ಒಂಬತ್ತು ಗಂಟೆಗೆಲ್ಲ ಓದುವುದು ಬರೆಯುವುದು ಎಲ್ಲ ಮುಗಿಸಿ ಮಕ್ಕಳು ಊಟಕ್ಕೆ ಕೂರುತ್ತಿದ್ದರು. ಊಟ ಆದ ನಂತರ ಭದ್ರಿ ಮತ್ತು ಸೀತ ಮಲಗಲು ತಯಾರಾದರೆ ಎಂಟನೇ ತರಗತಿಯಲ್ಲಿರುವ ಗೀತ ಓದುವುದನ್ನು ಮುಂದುವರೆಸುತ್ತಿದ್ದಳು. ತಮ್ಮ ತಾಯಿಯ ಪಡಿಪಾಟಲನ್ನು ನೋಡುತ್ತಲೇ ಬೆಳೆದ ಮಕ್ಕಳು ತಾಯಿಗೆ ಕಷ್ಟ ಕೊಡುತ್ತಿರಲಿಲ್ಲ. ತಮ್ಮ ಆಸೆಗಳನ್ನು ಆದಷ್ಟು ಅದುಮಿಟ್ಟುಕೊಳ್ಳುತ್ತಿದ್ದರು. ಸೀತೆ ಮತ್ತು ಭದ್ರಿಗೆ ಮಲಗುವಾಗ ಅಮ್ಮ ಪಕ್ಕದಲ್ಲಿದ್ದರೇನೇ ನಿದ್ದೆ ಬರುವುದು. ಆದರೆ ಬೇಗ ಬಂದು ಮಕ್ಕಳ ಜೊತೆ ಮಲಗಲು ಲಕ್ಷ್ಮಿಗೆ ಆಗುವುದಿಲ್ಲ. ಅವಳಿಗೆ ಊಟದ ನಂತರವೂ ಅನೇಕ ಕೆಲಸಗಳಿವೆ. ಮುಸುರೆ ಪಾತ್ರೆಗಳನ್ನು ಅಡಿಗೆ ಮನೆಯಿಂದ ಬಚ್ಚಲಿಗೆ ಸಾಗಿಸಬೇಕು, ತೊಳೆಯಬೇಕು, ಜೋಡಿಸಬೇಕು. ಅಡಿಗೆ ಮನೆ ಗುಡಿಸಿ ಸಾರಿಸಬೇಕು. ಹಿತ್ತಲಿಗೆ ಹೋಗಿ ಪ್ರೀತಿಯಿಂದ ಸಾಕಿದ್ದ ಎರಡು ಎಮ್ಮೆಗಳಿಗೆ ಹುಲ್ಲಾಕಬೇಕು. ಇತ್ತೀಚೆಗಷ್ಟೇ ಈದಿರುವ ಎಮ್ಮೆಯನ್ನು ಮಾತನಾಡಿಸಿ ಸಣ್ಣ ಕರುವನ್ನು ಮೈತೂಬರಿಸಿದರೆ ಅದು ಚಂಗನೆ ಹಾರಿ ನಿಲ್ಲುವುದನ್ನು ಕಣ್ತುಂಬಿಕೊಳ್ಳಬೇಕು. ಕರು ಕೂಗಿದ ತಕ್ಷಣ ಓಡಿ ಬಂದು ಅಪ್ಪಿಕೊಳ್ಳುವ ಗೀತ ಸೀತ ಭದ್ರಿಯರು! ಅಂತೂ ಅಮ್ಮ ಬರುವುದು ಎಷ್ಟು ತಡವಾದರೂ ಮಕ್ಕಳು ಮಲಗುವುದೇ ಇಲ್ಲ.

ಲಕ್ಷ್ಮಿ ಮತ್ತು ಮಕ್ಕಳೆಲ್ಲ ತಮ್ಮ ತಮ್ಮ ಕೆಲಸ ಕಾರ್ಯ, ಓದು ಬರಹದಲ್ಲಿ ಮುಳುಗಿದಂತೆ ಕಂಡರೂ ಅವರೆಲ್ಲರೊಳಗೆ ದುಗುಡ, ಆತಂಕ ತುಂಬಿರುತ್ತಿತ್ತು. ಬೆಳಿಗ್ಗೆ ಸ್ಕೂಲಿಗೆಂದು ಹೋಗಿದ್ದ ಜಯ್ಯಣ್ಣ ಮೇಷ್ಟ್ರು ಮನೆಗಿನ್ನೂ ಬಂದಿರಲಿಲ್ಲ. ಅವರು ಇಷ್ಟು ಹೊತ್ತಿಗೇ ಬರುತ್ತಾರೆ ಎಂಬುದು ಖಚಿತವಿರಲಿಲ್ಲ. ಬಾರದೆಯೂ ಇರಬಹುದು. ಬಂದರೆ ಅಲ್ಲೊಂದು ವಿಲಕ್ಷಣ ದೃಶ್ಯ ಅನಾವರಣಗೊಳ್ಳುತ್ತಿತ್ತು. ಮೈಮೇಲೆ ಎಚ್ಚರವಿಲ್ಲದಂತೆ ಕುಡಿದು ಚಿತ್ತಾಗಿ ಬರುವ ಜಯ್ಯಣ್ಣ ದೊಡ್ಡ ಗಂಟಲಲ್ಲಿ ಅಳುವುದು ಮನೆ ಮಂದಿಯೆಲ್ಲರ ಕ್ಷಮೆ ಯಾಚಿಸುವುದು ಶುರುವಾಗುತ್ತಿತ್ತು. ಲಕ್ಷ್ಮಿ ಎದುರು ನಿಂತು 'ಲಕ್ಷ್ಮಿ ನನ್ನನ್ನು ಕ್ಷಮಿಸಿ ಬಿಡಮ್ಮ. ನೀನು ದೇವರ ಸಮಾನ. ನಿನ್ನನ್ನು ಮದುವೆಯಾದ ನಾನು ಧನ್ಯ, ಎಷ್ಟು ಜನ್ಮದ ಪುಣ್ಯ ಫಲವೋ! ಆದರೆ ನಾನು ಪಾಪಿ. ಕುಡಿದು ಬಂದಿದ್ದೇನೆ. ಇವತ್ತೇ ಕೊನೆ. ಇನ್ನು ಮೇಲೆ ಒಂದು ಹನಿ ಕುಡಿಯುವುದಿಲ್ಲ. ನನ್ನ ತಂದೆ, ತಾಯಿ, ದೇವರು, ನೀನು ಮತ್ತು ಇಲ್ಲಿ ನೋಡು ಈ ಮಕ್ಕಳ ಮೇಲೆ ಆಣೆ ಮಾಡಿ ಹೇಳುತ್ತೇನೆ. ಇನ್ನು ಕುಡಿಯುವುದಿಲ್ಲ' ಎಂದು ಎಲ್ಲರ ತಲೆಯ ಮೇಲೆ ಕೈಇಟ್ಟು ಅಳುತ್ತಾರೆ. ಮನೆಮಂದಿಯೆಲ್ಲ ಮುಜುಗರ, ನಾಚಿಕೆ, ಅವಮಾನ, ಆಘಾತ ಅನುಭವಿಸುತ್ತಾರೆ. ಬಟ್ಟೆಗಳೆಲ್ಲ ಮಣ್ಣಾಗಿ ಮೇಷ್ಟ್ರು ಭಿಕಾರಿಯಂತೆ ಕಾಣುತ್ತಾರೆ. ಕಾಲಲ್ಲಿ ಚಪ್ಪಲಿ ಇದ್ದರೆ ಇರಬಹುದು, ಇಲ್ಲದಿದ್ದರಿಲ್ಲ. ರಸ್ತೆಯಲ್ಲಿ ಓಡಾಡುವರೆಲ್ಲ ಬಂದು ನಿಂತು ನೋಡುತ್ತಾರೆ. ಮೊದಮೊದಲು ಅಕ್ಕಪಕ್ಕದ ಮನೆಯವರು, ಓಣಿಯ ಮಕ್ಕಳೆಲ್ಲ ನೆರೆಯುತ್ತಿದ್ದರು. ಆದರಿದು ಮದುವೆಯಾಗಿ ಹದಿನೈದು ವರ್ಷದಿಂದ ಏಕಪ್ರಕಾರವಾಗಿ ನಡೆದುಕೊಂಡು ಬಂದಿದೆ. ಈಗ ಪರಿಚಿತರು ಯಾರೂ ಬರುವುದಿಲ್ಲ. ಬಂದರೂ ಒಂದಷ್ಟು ಹೊತ್ತು ಮಜಾ ತೆಗೆದುಕೊಂಡು, ಒಂದಷ್ಟು ಮೇಷ್ಟನ್ನು ಬೈದು ಗದರಿಸಿ ಮಲಗಲು ತಿಳಿಸಿ ತೆರಳುತ್ತಾರೆ. ದಿನವೂ ಇದನ್ನು ನೋಡಿ ಅವರಿಗೂ ಬೇಜಾರು.

ಬಹಳಷ್ಟು ಸಲ ಲಕ್ಷ್ಮಿ ಮೇಷ್ಟ್ರನ್ನ ಹಿತ್ತಲಿಗೆ ಕರೆದುಕೊಂಡು ಹೋಗಿ ಬಟ್ಟೆ ಬಿಚ್ಚಿ ಸ್ನಾನ ಮಾಡಿಸುತ್ತಾಳೆ. ಮಕ್ಕಳೆಲ್ಲ ಬಂದು ತಂದೆಯ ಮೇಲೆ ನೀರು ಸುರಿಯುತ್ತಾರೆ. ಭದ್ರಿ ಒಮ್ಮೆ 'ಹಿಂಗೇ ಅಲ್ವೇನಕ್ಕ ಎಮ್ಮೆಗೆ ನಾವು ಸ್ನಾನ ಮಾಡಿಸುವುದು' ಎಂದು ಪ್ರಶ್ನಿಸಿ ಗೀತಾಳಿಂದ ಬೈಸಿಕೊಂಡಿದ್ದ. ನಂತರ ಹೊರಗಡೆ ರೂಮಿನಲ್ಲಿ ಹಾಸಿಗೆ ಹಾಸಿ ಮೇಷ್ಟ್ರನ್ನ ಎಲ್ಲರೂ ಸೇರಿ ಮಲಗಿಸುತ್ತಾರೆ.

ಕೆಲವು ಸಲ ಕುಡಿದು ತೂರಾಡುವ ಜಯ್ಯಣ್ಣ ಮೇಷ್ಟ್ರನ್ನ ಯಾರಾದರೂ ಮನೆಗೆ ತಲುಪಿಸಿ ಹೋಗುವುದುಂಟು. ಒಮ್ಮೊಮ್ಮೆ ಇಂಥ ಕಡೆ ಎಚ್ಚರವಿಲ್ಲದೆ ಬಿದ್ದಿದ್ದಾರೆಂದು ಯಾರಾದರೂ ಸುದ್ದಿ ಕೊಟ್ಟರೆ ಲಕ್ಷ್ಮಿ ಮತ್ತು ಮಕ್ಕಳೆಲ್ಲ ಸೇರಿ ಮೇಷ್ಟ್ರನ್ನ ಮನೆಗೆ ಸಾಗಿಸಿಕೊಂಡು ಬರುತ್ತಾರೆ. ಊರಲ್ಲೆಲ್ಲಾ ಇಡೀ ಕುಟುಂಬದ ಮೆರವಣಿಗೆಯಾಗುತ್ತದೆ. 'ಸ್ವರ್ಗದಲ್ಲಿರುವ ದೇವರೇ ಪಾನಮತ್ತನಾದ ನನ್ನನ್ನು ನರಕಕ್ಕೆ ದಬ್ಬು' ಮುಂತಾಗಿ ನಾಟಕೀಯವಾಗಿ ಕೂಗುವ ಮೇಷ್ಟ್ರನ್ನು ಲಕ್ಷ್ಮಿ ಮತ್ತು ಮಕ್ಕಳು ನಾನಾ ಭಂಗಿಯಲ್ಲಿ ಮನೆಗೆ ಕೊಂಡೊಯ್ಯುತ್ತಾರೆ. ಉದ್ದಕ್ಕೂ ನಗುವ ದಾರಿಹೋಕರು, ಅಯ್ಯೋ ಅನ್ನುವ ದಾರಿಹೋಕರು. ಲಕ್ಷ್ಮಿಗಷ್ಟೇ ಅಲ್ಲ ಚಿಕ್ಕವನಾದ ಭದ್ರಿಗೂ ತಾಳಲಾರದಷ್ಟು ಅವಮಾನ.

ಮೊದಲು ಮೇಷ್ಟ್ರ ಮನೆಯಲ್ಲಿ ಸೈಕಲ್ ಇತ್ತು. ಆದರದು ಒಂದು ದಿನ ಇದ್ದಕ್ಕಿದ್ದಂತೆ ಮಾಯವಾಯಿತು. ಮೇಷ್ಟ್ರು ಕಳೆದುಕೊಂಡರೋ, ಅಡವಿಟ್ಟರೋ, ಮಾರಿಕೊಂಡರೋ ಗೊತ್ತಿಲ್ಲ. ಶಾಲೆಯವರು ಗೀತಳಿಗೆ ಕೊಟ್ಟ ಸೈಕಲ್ ಸಹ ಅದೇ ದಾರಿ ಹಿಡಿಯಿತು.

ಇದನ್ನೆಲ್ಲ ಅನುಭವಿಸಿ ಲಕ್ಷ್ಮಿ ರೋಸಿ ಹೋಗಿದ್ದಾಳೆ. ಮದುವೆಯಾಗಿ ಗಂಡನ ಮನೆಗೆ ಬಂದಾಗ ಆಕೆಗಿನ್ನೂ ಹದಿನಾರು ವರ್ಷ. ಹುಟ್ಟಿದ ಐದು ಮಕ್ಕಳಲ್ಲಿ ಬದುಕುಳಿದವು ಮೂರು ಮಾತ್ರ. ಈಗ ಮೂವತ್ತೊಂದು ವರ್ಷದ ಲಕ್ಷ್ಮಿ ವಯಸ್ಸಾದವಳಂತೆ ಕಾಣುತ್ತಾಳೆ, ಇಡೀ ಮೈಯಲ್ಲಿ ಒಂದು ಪಾವು ಮಾಂಸವಿಲ್ಲದಂತೆ.

ಮನೆ ನಡೆಸಲು ಲಕ್ಷ್ಮಿ ಮಾಡದೆ ಬಿಟ್ಟ ಕೆಲಸವಿಲ್ಲ. ಒಂದಷ್ಟು ದಿನ ಟೈಲರಿಂಗ್ ಕೆಲಸ ಮಾಡಿದಳು. ಅದನ್ನು ಮುಂದುವರೆಸಿಯೂ ಇದ್ದಾಳೆ. ಶಾವಿಗೆ, ಹಪ್ಪಳ, ಸಂಡಿಗೆ, ಚಕ್ಕಿ, ಕೋಡುಬಳೆ, ಉಪ್ಪಿನಕಾಯಿ, ಚಟ್ನಿಪುಡಿ ಮಾಡಿ ಮಾರಾಟ ಮಾಡಿದಳು. ಕೌದಿಗಳನ್ನು ಹೊಲಿದು ವ್ಯಾಪಾರ ಮಾಡಿದಳು. ಎಮ್ಮೆ ಸಾಕಿ ಹಾಲು, ಬೆಣ್ಣೆ, ತುಪ್ಪ ಮಾರಾಟ ಮಾಡಿದಳು. ಮನೆ ನಡೆಸಿ ಅಳಿದುಳಿದ ದುಡ್ಡನ್ನು ಚೀಟಿಗಳಿಗೆ ಹಾಕಿ ದುಡ್ಡು ಕೂಡಿಡ ಬಹುದೋ ಎಂದು ನೋಡಿದಳು. ಬ್ಯಾಂಕಿನಲ್ಲಿ ಸಾಲ ಪಡೆಯಲು ಒದಗಿಸ ಬೇಕಾದ ಹತ್ತಾರು ದಸ್ತಾವೇಜುಗಳು, ಅವುಗಳನ್ನು ಪಡೆಯಲು ನೂರಾರು ಸಲ ಅಲೆಯಬೇಕಾಗುವ ಸರ್ಕಾರಿ ಕಚೇರಿಗಳು, ಕೊಡಬೇಕಾದ ಲಂಚ, ಅಧಿಕಾರಿಗಳೆಂಬ ಗಂಡಸರ ಕಣ್ನೋಟಗಳಿಗೆ ಹೇಸಿ ಚೀಟಿಗೆ ದುಡ್ಡು ಹಾಕುವುದೇ ಅವಳಿಗೆ ಸುಲಭವಾಗಿ ತೋರುತ್ತಿತ್ತು. ಅಷ್ಟೂ ಅಲ್ಲದೆ ದುಡ್ಡನ್ನು ಮನೆಯಲ್ಲಿ ಎಲ್ಲೇ ಬಚ್ಚಿಟ್ಟರೂ ಲಪಟಾಯಿಸುವ ಗಂಡ. ಆದ್ದರಿಂದ ಯಾವುದಾದರೂ ಒಂದೆರಡು ಸಣ್ಣ ಪುಟ್ಟ ಚೀಟಿಗಳನ್ನು ಲಕ್ಷ್ಮಿ ಹಾಕಿಕೊಂಡಿರುತ್ತಿದ್ದಳು. ಜಯ್ಯಣ್ಣ ಮೇಷ್ಟ್ರು ಸರ್ಕಾರಿ ನೌಕರರಾಗಿ ಸಂಬಳ ಪಡೆಯುತ್ತಿದ್ದುದರಿಂದ ಲಕ್ಷ್ಮಿಗೆ ಯಾವುದೇ ಸಹಾಯ ಧನದ ಸಾಲಗಳು ಸಹ ಬ್ಯಾಂಕಿನಿಂದ ದೊರೆಯುತ್ತಿರಲಿಲ್ಲ.

ಜಯ್ಯಣ್ಣ ಮೇಷ್ಟ್ರು ಮನೆ ಕಡೆಗೆ ಗಮನವನ್ನೇ ಕೊಟ್ಟವರಲ್ಲ. ಮನೆ ಬಾಡಿಗೆ, ಕರೆಂಟಿಂದ ಹಿಡಿದು ಊಟ, ತಿಂಡಿ, ಕಾಫಿ, ಹಬ್ಬ ಹರಿದಿನ, ಮಕ್ಕಳ ಪುಸ್ತಕ, ಬಟ್ಟೆಬರೆ, ಕಾಯಿಲೆ ಕಸಾಲೆ ಮುಂತಾದ ಎಲ್ಲವನ್ನೂ ಅವಳೇ ನಿಭಾಯಿಸಬೇಕು. ಮೇಷ್ಟು ಮನೆಗಾಗಲೀ, ಶಾಲೆಗಾಗಲೀ